**ಕರ್ನಾಟಕ ಲೋಕಾಯುಕ್ತ, ಬೆಂಗಳೂರು.**

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ–851/2021/ಎ.ಆರ್.ಎಲ್.ಒ–1. ದಿನಾಂಕ:21–02–2022.

**ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(1) ರನ್ವಯ ವರದಿ**

ವಿಷಯ:– ದೂರುದಾರರ ನವೆಂಬರ್–2019 ರ ಮಾಹೆಯ 20 ದಿವಸಗಳ ಸಂಬಳದ ಬಿಲ್ ಮತ್ತು ಗಳಿಕೆ ರಜೆ ನಗಧೀಕರಣದ ಬಿಲ್ ಹಣ ಪಾವತಿಯಲ್ಲಿ ಆಗಿರುವ ವಿಳಂಬದ ಬಗ್ಗೆ.

******

ಶ್ರೀ ಪ್ರಕಾಶ ಎಸ್. ಬಾರಿಗಿಡದ, ಕಾರ್ಯಪಾಲಕ ಅಭಿಯಂತರರು (ನಿವೃತ್ತರು), ನಂ:104, ವಿದ್ಯಾಗಿರಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್, 7ನೇ 'ಏ' ಕ್ರಾಸ್, ವಿದ್ಯಾಗಿರಿ ಬಡಾವಣೆ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು (1) ಶ್ರೀ ಎಂ.ಜಿ.ನಾಗರಾಜು, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ಪೂರ್ವ ವಿಭಾಗ, ಬಿಬಿಎಂಪಿ., ಬೆಂಗಳೂರು ಮತ್ತು (2) ಶ್ರೀಮತಿ ಸಾವಿತ್ರಿ ಹಕ್ಕಿ, ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ದಕ್ಷಿಣ ವಿಭಾಗ, ಬಿಬಿಎಂಪಿ., ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ವಿಳಂಬಕ್ಕೆ ಸೂಕ್ತ ವಿಚಾರಣೆ ಮಾಡಿ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

3. ದೂರಿನ ಸಂಕ್ಷಿಪ್ತ ವಿವರ:– ದೂರುದಾರರಾದ ಶ್ರೀ ಪ್ರಕಾಶ್ ಎಸ್. ಬಾರಿಗಿಡದ ರವರ ಆಪಾದನೆ ಏನೆಂದರೆ, ತಾವು ದಿನಾಂಕ:02–03–2020 ರಂದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವಿಭಾಗ, ಬೆಂಗಳೂರು ಕಛೇರಿಯಲ್ಲಿ ಕಾರ್ಯನಿರ್ವಹಿಸಿ

ದಿನಾಂಕ:30-06-2020 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು, ತಾವು ಈ ಹಿಂದೆ ಬಿಬಿಎಂಪಿ., ರಸ್ತೆ ಮೂಲಭೂತ ಸೌಕರ್ಯ ವಲಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನವೆಂಬರ್-2019 ರ ಮಾಹೆಯ 20 ದಿನದ ಸಂಬಳ ಮತ್ತು ಗಳಿಕೆರಜೆ ನಗಧೀಕರಣ ಕುರಿತು ಪ್ರಸ್ತಾಪನೆಗಳಿಗೆ ಅನುಮೋದನೆ ಪಡೆದು ಬಿಲ್ ತಯಾರಿಸಿ ಪಾವತಿಸುವಂತೆ ಎದುರುದಾರರಿಗೆ ಸಲ್ಲಿಸಿದ್ದು, ಈ ಕುರಿತು ಜನವರಿ-2020 ರಲ್ಲಿ ಸದರಿ ಕಛೇರಿಯಲ್ಲಿ ಬಿಲ್ ತಯಾರಿಸಿದ್ದರೂ ಸಹ ಲೆಕ್ಕಪತ್ರ ಶಾಖೆಗೆ ಕಳುಹಿಸದೇ ವಿಳಂಬ ಮಾಡಲಾಗಿದೆ. ತಾವು ವೈಯಕ್ತಿಕವಾಗಿ ಸಾಕಷ್ಟು ಸಲ ಎದುರುದಾರರ ಕಛೇರಿಗೆ ವಿನಂತಿಸಿ ಕೊಂಡರೂ ಸಹ ಯಾವುದೇ ಕ್ರಮ ಜರುಗಿಸಲ್ಲ. ಸದರಿ ಅವಧಿಯಲ್ಲಿದ್ದ ಮುಖ್ಯ ಅಭಿಯಂತರರಾದ ಶ್ರೀ ಸೋಮಶೇಖರ್ ಎಸ್.ರವರು ತಮ್ಮ ಊರಿನಲ್ಲಿ ದೇವಸ್ಥಾನ ನಿರ್ಮಿಸಲು ರೂ.2 ಲಕ್ಷ ನೀಡುವಂತೆ ತಮಗೆ ಮೌಖಿಕವಾಗಿ ಹೇಳಿದ್ದು ತಾವು ರೂ. 50,000/-ಗಳನ್ನು ನೀಡಿದ್ದು ಸದರಿ ಕಾರ್ಯಪಾಲಕ ಅಭಿಯಂತರರ ಮುಖಾಂತರ ತಮಗೆ ಹಣಕ್ಕೆ ಒತ್ತಾಯಿಸಿ ಕಿರುಕುಳ ನೀಡಿರುತ್ತಾರೆಂದು ಆಪಾದಿಸಿರುತ್ತಾರೆ.

4. ಮುಂದುವರೆದು, ತಾವು ದಿನಾಂಕ:20-01-2020 ರಂದು ಬಿಬಿಎಂಪಿ., ಕಛೇರಿಯಿಂದ ಬಿಡುಗಡೆ ಹೊಂದಿದ್ದು ಯಾವುದೇ ಸಕಾರಣ ಇಲ್ಲದೇ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ (ಪೂರ್ವ) ಮತ್ತು ದಕ್ಷಿಣ ರವರು 5 ತಿಂಗಳ ವಿಳಂಬ ಮಾಡಿ ದಿನಾಂಕ:23-6-2020 ರಂದು ತಮ್ಮ ಎಲ್.ಪಿ.ಸಿ. ಕಳುಹಿಸಿರುತ್ತಾರೆ ಹಾಗೂ ಉದ್ದೇಶಪೂರ್ವಕವಾಗಿ ಗಳಿಕೆ ರಜೆ ನಗಧೀಕರಣ ಮತ್ತು ನವೆಂಬರ್ ತಿಂಗಳ 20 ದಿನಗಳ ಸಂಬಳ ವಿತರಣೆ ಮಾಡಲು ವಿಳಂಬ ಮಾಡಿರುವುದಕ್ಕೆ ಎದುರುದಾರರ ವಿರುದ್ಧ ವಿಚಾರಣೆ ಮಾಡಿ ಶಿಸ್ತು ಕ್ರಮ ಜರುಗಿಸಬೇಕೆಂದು ಕೋರಿ ಕೊಂಡಿರುತ್ತಾರೆ.

5. ತಮ್ಮ ದೂರಿನೊಂದಿಗೆ ದೂರುದಾರರು ಗಳಿಕೆ ರಜೆ ನಗದೀಕರಣ ಮಂಜೂರಾತಿಗೆ ಸಂಬಂಧಪಟ್ಟ ದಿನಾಂಕ: 31-12-2019 ರ ಬಿಬಿಎಂಪಿ., ಉಪ ಆಯುಕ್ತರವರ ಕಛೇರಿಯ ಆದೇಶದ ಪ್ರತಿ, ದೂರುದಾರರ ಹಕ್ಕಿನಲ್ಲಿರುವ ರಜೆ ಮತ್ತು ಕಡ್ಡಾಯ ನಿರೀಕ್ಷಣಾ ಅವಧಿ ಮಂಜೂರು ಮಾಡುವ ಬಗ್ಗೆ ಬಿಬಿಎಂಪಿ., ಆಯುಕ್ತರವರ ದಿನಾಂಕ:01-01-2020 ರ ಕಛೇರಿ ಆದೇಶದ ಪ್ರತಿ ಹಾಗೂ ನವೆಂಬರ್-2019 ರ ಮಾಹೆಯ ವೇತನ ಪ್ರಮಾಣ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

6. 1ನೇ ಎದುರುದಾರರು ತಮ್ಮ ದಿನಾಂಕ:27-07-2021 ರ ಆಕ್ಷೇಪಣೆಯಲ್ಲಿ ದೂರಿನ ಅಂಶಗಳೆನೆಲ್ಲಾ ಅಲ್ಲಗಳೆದು ಮೂಲಭೂತ ಸೌಕರ್ಯ,ಪಶ್ಚಿಮ ವಿಭಾಗ ಕಛೇರಿ, ಬಿಬಿಎಂಪಿ., ಬೆಂಗಳೂರು ಹಾಗೂ ರಸ್ತೆ ಮೂಲಭೂತ ಸೌಕರ್ಯ, ದಕ್ಷಿಣ ವಿಭಾಗ ಮತ್ತು ರಸ್ತೆ ಅಗಲೀಕರಣ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 38 ನೌಕರರ ಮಾಸಿಕ ದೃಢೀಕೃತ ಹಾಜರಾತಿಯನ್ನು ಪಡೆದು ತಮ್ಮ ಕಛೇರಿಯಿಂದ ಮಾಸಿಕ ವೇತನವನ್ನು ಪಾವತಿಗಾಗಿ ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮುಖಾಂತರ ಮತ್ತು ಬಿಲ್ಲಿನ ಪ್ರತಿಯನ್ನು ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಗೆ ಸಲ್ಲಿಸಲಾಗುತ್ತದೆ. ಈ ರೀತಿ ಸಲ್ಲಿಸಲಾಗುವ ಬಿಲ್ಲುಗಳಿಗೆ ಸಾಮಾನ್ಯವಾಗಿ ಸ್ವೀಕೃತಿ ನೀಡುವ ಕ್ರಮ ಇರುವುದಿಲ್ಲ. ನಂತರ ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಯಲ್ಲಿ ಮೇಲಾಧಿಕಾರಿಯವರ ಆದೇಶದ ನಂತರ ಸಂಬಂಧಪಟ್ಟ ನೌಕರರ ಬ್ಯಾಂಕ್ ಖಾತೆಗೆ ಹಣವನ್ನು ವರ್ಗಾಹಿಸಲಾಗುತ್ತದೆ ಮತ್ತು ಕಾಲ-ಕಾಲಕ್ಕೆ ನೌಕರರ ವಾರ್ಷಿಕ ವೇತನ ಬಡ್ತಿ, ಗಳಿಕೆರಜೆ ನಗಧೀಕರಣ, ಮುಂಬಡ್ತಿ ಬಾಕಿ ಪಾವತಿ, ವಿಶೇಷ ಭತ್ಯೆ, ತುಟ್ಟಿ ಭತ್ಯೆ ಬಾಕಿ ಇವುಗಳನ್ನು ಸರ್ಕಾರದ ಹಾಗೂ ಪಾಲಿಕೆಯ ಆದೇಶದ ಪ್ರಕಾರ ಪಾವತಿಗಾಗಿ ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮುಖಾಂತರ ಬಿಲ್ ಪ್ರತಿಗಳನ್ನು ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಗೆ ಸಲ್ಲಿಸಲಾಗುತ್ತದೆ. ಆದರೆ, ಈಗಾಗಲೇ ತಿಳಿಸಿರುವಂತೆ ಸದರಿ ಬಿಲ್‌ಗಳಿಗೆ ಸಾಮಾನ್ಯವಾಗಿ ಸ್ವೀಕೃತಿ ನೀಡುವ ಪರಿಪಾಠ ಇರುವುದಿಲ್ಲವೆಂದು ಹೇಳಿರುತ್ತಾರೆ.

7. ನೌಕರರು ಗಳಿಕೆರಜೆ ನಗಧೀಕರಣ ಮತ್ತು ಇತರ ಆದೇಶಗಳನ್ನು ಪಡೆದಾಗ, ಆದೇಶಗಳ ಪ್ರತಿಗಳನ್ನು ಕೆಲವು ಬಾರಿ ಟಪಾಲಿನಲ್ಲಿ ತಮ್ಮ ಕಛೇರಿಗೆ ಕಳುಹಿಸಲಾಗಿರುತ್ತದೆ ಮತ್ತು ಹಲವು ಬಾರಿ ನೌಕರರು ನೇರವಾಗಿ ಕಛೇರಿಗೆ ಪ್ರತಿಯನ್ನು ನೀಡುತ್ತಾರೆ. ಪ್ರಸ್ತುತ ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಕಛೇರಿಯ ಇನ್‌ವರ್ಡ್ ಪುಸ್ತಕವನ್ನು ಪರಿಶೀಲಿಸಲಾಗಿ,ದೂರುದಾರರಿಗೆ ಸಂಬಂಧಪಟ್ಟ ಗಳಿಕೆರಜೆ ನಗಧೀಕರಣ ಆದೇಶ ಮತ್ತು ನವೆಂಬರ್-2019 ರ ಮಾಹೆಯ 20 ದಿನದ ಸಂಬಳದ ಆದೇಶಗಳು ಕೇಂದ್ರ ಕಛೇರಿ ಆಡಳಿತ ಶಾಖೆಯಿಂದ ಟಪಾಲು ಮುಖಾಂತರ ಬಂದಿರುವುದಿಲ್ಲ. ದೂರುದಾರರು ನೇರವಾಗಿ ನೀಡಿರಬಹುದಾಗಿದ್ದರಿಂದ ಸದರಿ ಆದೇಶದ ಅನುಸಾರ ಬಿಲ್ಲುಗಳನ್ನು ತಯಾರಿಸಿ ಹೆಚ್.ಆರ್.ಎಂ.ಎಸ್.ತಂತ್ರಾಂಶದ ಮುಖಾಂತರ ಮತ್ತು ಬಿಲ್ ಪ್ರತಿಯನ್ನು ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಗೆ ಈ ಹಿಂದೆಯೇ ದಿನಾಂಕ:31-12-2019 ರಂದೇ ಸಲ್ಲಿಸಲಾಗಿರುತ್ತದೆ. ಈ ಸಂಬಂಧ ಅದರ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

8. 1ನೇ ಎದುರುದಾರರು ತಮ್ಮ ಮುಂದುವರೆದ ಆಕ್ಷೇಪಣೆಯಲ್ಲಿ ಈ ಕಛೇರಿಯಿಂದ ದಿನಾಂಕ:21-06-2021 ರ ಪತ್ರವು ತಮಗೆ ತಲುಪಿದ ನಂತರ ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಯಲ್ಲಿ ವಿಚಾರಿಸಲಾಗಿ ನೌಕರರಿಗೆ ಬಿಲ್ ಪಾವತಿ ಆಗದೇ ಇರುವುದು ಕಂಡುಬಂದಿದ್ದರಿಂದ ಪುನ: ಬಿಲ್ ಸಲ್ಲಿಸಲು ಈ ಹಿಂದೆ ಬಿಲ್ ಕಳುಹಿಸಿದ ಶಾಖೆಯವರು ಸೂಚಿಸಿದ್ದರ ಮೇರೆಗೆ ಪುನ: ನೌಕರರ ಗಳಿಕೆರಜೆ ನಗದೀಕರಣ ಮತ್ತು ನವೆಂಬರ್-2019 ರಮಾಹೆಯ 20 ದಿನದ ಸಂಬಳದ ಬಿಲ್ಲನ್ನು ತಯಾರಿಸಿ ಹೆಚ್.ಆರ್.ಎಂ.ಎಸ್. ತಂತ್ರಾಂಶದ ಮುಖಾಂತರ ಬಿಲ್ ಪ್ರತಿಯನ್ನು ಸಲ್ಲಿಸಲಾಗಿದೆ ಎಂದು ದಿನಾಂಕ:06-07-2021 ರ ಹೆಚ್.ಆರ್. ಎಂ.ಎಸ್.ಪ್ರತಿಯನ್ನು ಲಗತ್ತಿಸಿರುತ್ತಾರೆ.

9. ಇನ್ನೂಳಿದಂತೆ, ದೇವಸ್ಥಾನಕ್ಕೆ ಸಂಬಂಧಿಸಿದಂತೆ ದೂರುದಾರರು ಮಾಡಿರುವ ಆಪಾದನೆಯು ಆಧಾರ ರಹಿತವಾಗಿದ್ದು ಇದಕ್ಕೆ ಸಂಬಂಧಿಸಿದಂತೆ ತಮಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ದೂರುದಾರರೊಂದಿಗೆ ಯಾವುದೇ ಸಂದರ್ಭದಲ್ಲಿ ಮಾತನಾಡಿಲ್ಲವೆಂದು ಹೇಳಿರುತ್ತಾರೆ.

10. ದೂರುದಾರರ ಇನ್ನೂಳಿದ ಆರೋಪವಾದ ಎದುರುದಾರರು ಎಲ್.ಪಿ.ಸಿ.ಯನ್ನು ಕಳುಹಿಸಲು ವಿಳಂಬ ಮಾಡಿ ದಿನಾಂಕ:23-06-2020 ರಂದು ತಡವಾಗಿ ಕಳುಹಿಸಿರುತ್ತಾರೆ ಎನ್ನುವ ಆಪಾದನೆಗೆ ಸಂಬಂಧಪಟ್ಟಂತೆ ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಸರ್ಕಾರವು ಲಾಕ್‌ಡೌನ್ ಘೋಷಿಸಿದ್ದರಿಂದ ಕಛೇರಿಯಲ್ಲಿ ಕೇವಲ 50 ಪ್ರತಿಶತ ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿದ್ದರಿಂದ ಎಲ್.ಪಿ.ಸಿ. ಕಳುಹಿಸಲು ಸ್ವಲ್ಪ ವಿಳಂಬವಾಗಿರುತ್ತದೆಂದು ಹೇಳಿರುತ್ತಾರೆ. ಈ ಕಾರಣದಿಂದ ತಮ್ಮನ್ನು ದೋಷಮುಕ್ತರನ್ನಾಗಿ ಮಾಡಲು ಕೋರಿ ಕೊಂಡಿರುತ್ತಾರೆ.

11. 2ನೇ ಎದುರುದಾರರು ತಮ್ಮ ದಿನಾಂಕ:20-07-2021 ರ ಆಕ್ಷೇಪಣೆಯಲ್ಲಿ, ದೂರುದಾರರ ದೂರಿನ ಅಂಶಗಳನ್ನೆಲ್ಲ ಅಲ್ಲಗಳೆದಿರುತ್ತಾರೆ. ದೂರುದಾರರು ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿದ್ದು ನವೆಂಬರ್-2019 ರ ಮಾಹೆಯ 20 ದಿನಗಳ ಸಂಬಳ ಮತ್ತು ಗಳಿಕೆ ರಜೆ ನಗದೀಕರಣ ಪಾವತಿಗೆ ಕುರಿತ ವಿಷಯವು ತಮಗೆ ಸಂಬಂಧಿಸಿರುವುದಿಲ್ಲವೆಂದು ಹಾಗೂ ದೂರುದಾರರು ದೇವಸ್ಥಾನಕ್ಕೆ ಸಂಬಂಧಪಟ್ಟ ಆಪಾದನೆಯು ಆಧಾರ ರಹಿತವಾಗಿದೆ ಹಾಗೂ ಎಲ್.ಪಿ.ಸಿ. ಕಳುಹಿಸಲು ವಿಳಂಬವಾಗಿದೆ ಎನ್ನುವ ದೂರುದಾರರ ಆರೋಪಕ್ಕೂ ಸಹ ತಾವು ಜವಬ್ದಾರರಾಗಿರುವುದಿಲ್ಲವೆಂದು ಹೇಳಿರುತ್ತಾರೆ.

12. ದೂರುದಾರರು ತಮ್ಮ ದಿನಾಂಕ:28-10-2021 ರ ಪ್ರತ್ಯುತ್ತರದಲ್ಲಿ, ಎದುರುದಾರರು ತಾವು ನಿವೃತ್ತಿ ಹೊಂದುವ ವಿಷಯ ಗೊತ್ತಿದ್ದರೂ ಸಹ ವಿನ: ಕಾರಣ ತಮ್ಮ ಎಲ್.ಪಿ.ಸಿ. ನೀಡದೇ 5 ತಿಂಗಳ ಸಂಬಳ ತಡೆ ಮಾಡಿರುತ್ತಾರೆ. ಗಳಿಕೆ ರಜೆ ನಗದೀಕರಣ ಮತ್ತು ನವೆಂಬರ್ ತಿಂಗಳ 20 ದಿನಗಳ ಸಂಬಳ ವಿತರಿಸುವಲ್ಲಿ 20 ತಿಂಗಳು ವಿಳಂಬ ಮಾಡಿ ತಮಗೆ ಮಾನಸಿಕ ಹಿಂಸೆ ನೀಡಿರುವುದರಿಂದ ಎದುರುದಾರರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಕೋರಿಕೊಂಡಿರುತ್ತಾರೆ. ಆದರೆ, ತಮ್ಮ ಪ್ರತ್ಯುತ್ತರದಲ್ಲಿ ಮುಖ್ಯ ಅಭಿಯಂತರರಾದ ಶ್ರೀ ಸೋಮಶೇಖರ್ ಎಸ್. ರವರು ತಮ್ಮ ಊರಿನಲ್ಲಿ ದೇವಸ್ಥಾನ ನಿರ್ಮಿಸಲು ರೂ.2 ಲಕ್ಷ ಕೇಳಿದ್ದ ಮೇರೆಗೆ ತಾವು

ರೂ.50,000/- ಗಳನ್ನು ನೀಡಿದ್ದು, ಬಾಕಿ ಹಣ ಪಾವತಿಸಲು ಎದುರುದಾರರ ಮೂಲಕ ಒತ್ತಾಯಿಸಿ ಕಿರುಕುಳ ನೀಡುತ್ತಿದ್ದಾರೆ ಎನ್ನುವ ಆರೋಪಕ್ಕೆ ಸಂಬಂಧಪಟ್ಟಂತೆ ಯಾವುದೇ ಅಂಶಗಳನ್ನು ಉಲ್ಲೇಖಿಸಿರುವುದಿಲ್ಲ.

13. ದೂರುದಾರರ ಪ್ರತ್ಯುತ್ತರವನ್ನು ಅವಲೋಕಿಸಿದಾಗ, ದೂರುದಾರರಿಗೆ ಈಗಾಗಲೇ ಗಳಿಕೆ ರಜೆ ನಗಧೀಕರಣ, ನವೆಂಬರ್ ತಿಂಗಳ 20 ದಿನಗಳ ಸಂಬಳ ಹಾಗೂ ಎಲ್.ಪಿ.ಸಿ. ದೊರೆತ್ತಿರುವುದು ಹಾಗೂ ತಮ್ಮ ಸಮಸ್ಯೆ ಈಗಾಗಲೇ ಪರಿಹಾರವಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ, ತಮ್ಮ ಸಮಸ್ಯೆ ಪರಿಹರಿಸುವಲ್ಲಿ ಎದುರುದಾರರು ವಿಳಂಬ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಅವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮದಂತೆ ಶಿಸ್ತು ಕ್ರಮ ಜರುಗಿಸಬೇಕೆಂಬುದು ದೂರುದಾರರ ಆರೋಪವಾಗಿದೆ.

14. ದೂರುದಾರರು ದಿನಾಂಕ:2-3-2020 ರಂದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವಿಭಾಗ, ಬೆಂಗಳೂರು ಕಚೇರಿಯಲ್ಲಿ ಕಾರ್ಯನಿರ್ವಹಿಸಿ ದಿನಾಂಕ: 30-06-2020 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದು ಎದುರುದಾರರು ಅಲ್ಲಗಳೆದಿರುವುದಿಲ್ಲ. ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನವೆಂಬರ್-2019 ರ ಮಾಹೆಯ 20 ದಿನದ ಸಂಬಳ ಮತ್ತು ಗಳಿಕೆರಜೆ ನಗಧೀಕರಣ ಕುರಿತು ಪ್ರಸ್ತಾಪನೆಗೆ ಅನುಮೋದನೆ ಪಡೆದು ಬಿಲ್ ತಯಾರಿಸಿ ಪಾವತಿಸಲು 1ನೇ ಎದುರುದಾರರ ವಿಭಾಗಕ್ಕೆ ಕಳುಹಿಸಿದ್ದು, ಜನವರಿ-2020 ರಲ್ಲಿ ಬಿಲ್ ತಯಾರಿಸಿದ್ದು ಲೆಕ್ಕಪತ್ರ ಶಾಖೆಗೆ ಕಳುಹಿಸದೇ ವಿಳಂಬ ಮಾಡಿ ಕರ್ತವ್ಯಲೋಪವೆಸಗಿದ್ದಾರೆ ಎನ್ನುವ ದೂರುದಾರರ ಆಪಾದನೆಗೆ ಸಂಬಂಧಪಟ್ಟಂತೆ ಪರಿಶೀಲಿಸಿದಾಗ, 1ನೇ ಎದುರುದಾರರ ಪ್ರಕಾರ ಬಿಲ್ಲನ್ನು ಪಾವತಿಗಾಗಿ ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಗೆ ಈ ಹಿಂದೆಯೇ ಸಲ್ಲಿಸಲಾಗಿದ್ದು, ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಯಿಂದ ಬಿಲ್ ಪಾವತಿ ಆಗದೇ ಇರುವುದರಿಂದ ಪುನ: ಮತ್ತೊಮ್ಮೆ ಸದರಿ ಶಾಖೆಗೆ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಲಾಗಿರುವುದು ಇರುತ್ತದೆ. ಹೀಗಾಗಿ ಸಂಬಳದ ಬಿಲ್ಲನ್ನು ಪಾವತಿಗಾಗಿ ಕಳುಹಿಸಲು

ವಿಳಂಬವಾಗಿರುವುದಿಲ್ಲ. ಈ ಬಗ್ಗೆ ಬಿಲ್ಲು ಪ್ರತಿಗಳನ್ನು ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಗೆ ಸಲ್ಲಿಸುವ ಸಮಯದಲ್ಲಿ ಸಾಮಾನ್ಯವಾಗಿ ಬಿಲ್ಲುಗಳಿಗೆ ಸಂಬಂಧಪಟ್ಟಂತೆ ಸ್ವೀಕೃತಿ ನೀಡುವ ಪರಿಪಾಠ ಇಲ್ಲ ಎನ್ನುವುದು 1ನೇ ಎದುರುದಾರರ ವಿವರಣೆ ಆಗಿರುತ್ತದೆ.

15. 1ನೇ ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ದಿನಾಂಕ:31-12-2019 ರಂದು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ 1ನೇ ಎದುರುದಾರರ ಕಛೇರಿಯಲ್ಲಿ ತಯಾರಿಸಿದ ಗಳಿಕೆ ರಜೆಯ ನಗಧೀಕರಣಕ್ಕೆ ಸಂಬಂಧಪಟ್ಟ ಬಿಲ್, ದಿನಾಂಕ: 06-07-2021 ರಂದು 1ನೇ ಎದುರುದಾರರ ಕಛೇರಿಯಲ್ಲಿ ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ತಯಾರಿಸಿದ ಸಂಬಳ ಬಾಕಿಯ ಬಿಲ್ ಪ್ರತಿಯನ್ನು ಹಾಗೂ ದಿನಾಂಕ:17-07-2021 ರ ದಿನಾಂಕದ ಲೆಕ್ಕಪತ್ರ ಶಾಖೆಯ ಸ್ವೀಕೃತಿ ನಕಲಿನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಡಿಸೆಂಬರ್-2019 ರಲ್ಲಿ ದೂರುದಾರರಿಗೆ ಸಂಬಂಧಪಟ್ಟ ನವೆಂಬರ್ ಮಾಹೆಯ 20 ದಿವಸಗಳ ಸಂಬಳ ಮತ್ತು ಗಳಿಕೆ ನಗದೀಕರಣದ ಬಿಲ್ ಎದುರುದಾರರು ತಯಾರಿಸಿರುವುದಿಲ್ಲ ಎನ್ನುವುದು ದೂರುದಾರರ ಆಪಾದನೆ ಅಲ್ಲ. ಆದರೆ, ದೂರುದಾರರ ಆಪಾದನೆ ಏನೆಂದರೆ, ತಮ್ಮ ಸದರಿ ಬಿಲ್ಲುಗಳನ್ನು 20 ತಿಂಗಳ ನಂತರ ನಗಧೀಕರಣವಾಗಿರುತ್ತದೆ. ಕಾರಣ ತಯಾರಿಸಿದ ಬಿಲ್ಲುಗಳನ್ನು ಎದುರುದಾರರು ಕೇಂದ್ರ ಲೆಕ್ಕಪತ್ರ ಶಾಖೆಗೆ ಕಳುಹಿಸದೇ 20 ತಿಂಗಳ ವಿಳಂಬ ಮಾಡಿ ಕಳುಹಿಸಿದ್ದಾರೆ ಎಂಬುದು ದೂರುದಾರರ ಆಪಾದನೆ ಆಗಿರುತ್ತದೆ. ಆದ್ದರಿಂದ ಎದುರುದಾರರು ಹಾಜರುಪಡಿಸಿರುವ ದಿನಾಂಕ:31-12-2019 ರ ಗಳಿಕೆ ರಜೆಯ ಬಿಲ್ಲನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ತಯಾರಿಸಿರುವ ಪ್ರತಿಯಿಂದ ದೂರುದಾರರಿಗೆ ಸಂಬಂಧಪಟ್ಟ ಗಳಿಕೆ ರಜೆಯ ಬಿಲ್ ದಿನಾಂಕ:31-12-2019 ರಂದು ಮಾಡಲಾಗಿದೆ ಎನ್ನುವುದು ಕಂಡುಬರುತ್ತದೆಯೇ ಹೊರತು 1ನೇ ಎದುರುದಾರರು ದೂರುದಾರರಿಗೆ ಸಂಬಂಧಪಟ್ಟ ಗಳಿಕೆ ರಜೆಯ ಬಿಲ್ ಹಾಗೂ ನವೆಂಬರ್-2020 ರ 20 ದಿನಗಳ ಸಂಬಳದ ಬಿಲ್ಲುಗಳನ್ನು ಲೆಕ್ಕಪತ್ರ ಶಾಖೆಗೆ ನಗದೀಕರಣಕ್ಕೆ ಹಾಗೂ ಅನುಮೋದನೆಗೆ ಯಾವುದೇ

ವಿಳಂಬ ಮಾಡದೇ ಕಳುಹಿಸಿದ್ದಾರೆ ಎಂಬುದು ಕಂಡುಬರುವುದಿಲ್ಲ. ಮೇಲಾಗಿ, 20 ದಿನಗಳ ನವೆಂಬರ್ 2020 ರ ಸಂಬಳದ ಬಿಲ್ ಸಹ 2019 ರಲ್ಲಿಯೇ ಅಥವಾ ಜನವರಿ–2020 ರಲ್ಲಿ ಲೆಕ್ಕ ಶಾಖೆಗೆ ಕಳುಹಿಸಿರುವುದು ಕಂಡುಬರುವುದಿಲ್ಲ.

16. ಮೇಲಾಗಿ, 1ನೇ ಎದುರುದಾರರು ಹಾಜರುಪಡಿಸಿರುವ ದಿನಾಂಕ:17–07–2021 ರ ಲೆಕ್ಕ ಪತ್ರ ಶಾಖೆಯ ಸ್ವೀಕೃತಿ ನಕಲಿನ ಪ್ರತಿಯನ್ನು ಪರಿಶೀಲಿಸಿದಾಗ, ದೂರುದಾರರಿಗೆ ಸಂಬಂಧಪಟ್ಟ ಬಿಲ್ಲುಗಳು ಆ ಶಾಖೆಯ ಲೆಕ್ಕಪತ್ರ ಶಾಖೆಯಲ್ಲಿ ದಿನಾಂಕ:17–07–2021 ರಂದು ಸ್ವೀಕೃತವಾಗಿರುವುದು ಕಂಡುಬರುತ್ತದೆ. ಒಂದು ವೇಳೆ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುವಂತೆ, ತಮ್ಮ ಕಛೇರಿಯಿಂದ ಲೆಕ್ಕ ಪತ್ರ ಶಾಖೆಗೆ ಬಿಲ್ಲುಗಳನ್ನು ಕಳುಹಿಸಿದ ಬಗ್ಗೆ ಲೆಕ್ಕಪತ್ರ ಶಾಖೆಯಲ್ಲಿ ಯಾವುದೇ ಸ್ವೀಕೃತಿ ನೀಡಿರುವುದಿಲ್ಲ ಎಂದಾದರೆ 1ನೇ ಎದುರುದಾರರು ಹಾಜರುಪಡಿಸಿರುವ ದಿನಾಂಕ: 17–07–2021 ರ ಲೆಕ್ಕಪತ್ರ ಶಾಖೆಯ ಸ್ವೀಕೃತಿ ಪ್ರತಿಯನ್ನು ಪರಿಶೀಲಿಸಿದಾಗ, ಜುಲೈ–2021 ರಲ್ಲಿ ಕಳುಹಿಸಿದ ಬಿಲ್ಲುಗಳಿಗೆ ಸ್ವೀಕೃತಿ ನೀಡಿರುವುದು ಕಂಡುಬರುತ್ತದೆ. ಒಂದು ವೇಳೆ 1ನೇ ಎದುರುದಾರರ ಕಛೇರಿಯಿಂದ ಲೆಕ್ಕ ಪತ್ರ ಶಾಖೆಗೆ ಕಳುಹಿಸಿದ ಬಿಲ್ಲುಗಳ ಬಗ್ಗೆ ಲೆಕ್ಕ ಪತ್ರ ಶಾಖೆಯಿಂದ ಸ್ವೀಕೃತಿ ನೀಡುವ ಪರಿಪಾಠ ಇರದೇ ಇದ್ದಿದ್ದಲ್ಲಿ 1ನೇ ಎದುರುದಾರರು ಡಿಸೆಂಬರ್–2019 ರ ಮಾಹೆಯಲ್ಲಿಯೇ ತಮ್ಮ ಕಛೇರಿಯಿಂದ ದೂರುದಾರರ ಬಿಲ್ಲುಗಳನ್ನು ಲೆಕ್ಕ ಪತ್ರ ಶಾಖೆಗೆ ಕಳುಹಿಸಿರುವ ಬಗ್ಗೆ ತಮ್ಮ ಕಛೇರಿಯಲ್ಲಿ ನಿರ್ವಹಿಸುವ ಔಟ್‌ವರ್ಡ್ ವಹಿಯ ಪ್ರತಿಯನ್ನು ಹಾಜರುಪಡಿಸಬಹುದಾಗಿತ್ತು. ಒಂದು ವೇಳೆ 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುವಂತೆ, ಪುನ: ಬಿಲ್ಲುಗಳನ್ನು ತಯಾರಿಸಿ ಕಳುಹಿಸಲು ಲೆಕ್ಕಪತ್ರ ಶಾಖೆಯವರು ಸೂಚಿಸಿದರ ಮೇರೆಗೆ ದೂರುದಾರರಿಗೆ ಸಂಬಂಧಪಟ್ಟ ಗಳಿಕೆ ನಗಧೀಕರಣದ ಬಿಲ್ ಮತ್ತು 2019 ರ ನವೆಂಬರ್ ಮಾಹೆಯ 20 ದಿನಗಳ ಬಿಲ್ ಹೆಚ್.ಆರ್.ಎಂ.ಎಸ್. ನಲ್ಲಿ ತಯಾರಿಸಿ ಕಳುಹಿಸಿದ್ದೇ ಆಗಿದ್ದರೆ ಕೇಂದ್ರ ಕಛೇರಿಯ ಲೆಕ್ಕ ಪತ್ರ ಶಾಖೆಯವರು ಇನ್ನೊಮ್ಮೆ ಬಿಲ್ ಕಳುಹಿಸಲು ಸೂಚಿಸಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಬೇಕಾಗಿತ್ತು. ಆದರೆ, ಈ ಬಗ್ಗೆ ಯಾವುದೇ

ದಾಖಲೆಗಳು ಸಲ್ಲಿಸದೇ ಇರುವ ಕಾರಣ ದೂರುದಾರರಿಗೆ ಸಂಬಂಧಪಟ್ಟ ಬಿಲ್ಲುಗಳನ್ನು ಡಿಸೆಂಬರ್-2019ರಲ್ಲಿಯೇ 1ನೇ ಎದುರುದಾರರು ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಗೆ ಕಳುಹಿಸಿದ್ದರೂ ಸಹ ಸದರಿ ಬಿಲ್ಲುಗಳು ದೂರುದಾರರಿಗೆ ಪಾವತಿ ಆಗದೇ ಇರುವುದರಿಂದ ಪುನ: ಸಲ್ಲಿಸಲು ಕೇಂದ್ರ ಕಛೇರಿಯ ಲೆಕ್ಕ ಪತ್ರ ಶಾಖೆಯವರು ಸೂಚಿಸಿದ್ದರ ಮೇರೆಗೆ ಮತ್ತೊಮ್ಮೆ ಜುಲೈ-2021 ರಲ್ಲಿ ಬಿಲ್ ತಯಾರಿಸಿ ಕೇಂದ್ರ ಕಛೇರಿಯ ಲೆಕ್ಕ ಪತ್ರ ಶಾಖೆಗೆ ಕಳುಹಿಸಲಾಗಿದೆ ಎನ್ನುವ 1ನೇ ಎದುರುದಾರರ ಸಮಜಾಯಿಷಿ ಒಪ್ಪಲು ಆಗುವುದಿಲ್ಲ, ಹೀಗಾಗಿ ದೂರುದಾರರಿಗೆ ಸಂಬಂಧಪಟ್ಟ ನವೆಂಬರ್-2019 ರ ಮಾಹೆಯ 20 ದಿನಗಳ ಸಂಬಳದ ಬಿಲ್ ಮತ್ತು ಗಳಿಕೆ ರಜೆಯ ಬಿಲ್ಲನ್ನು 1ನೇ ಎದುರುದಾರರ ಕಛೇರಿಯಿಂದ ಕೇಂದ್ರ ಕಛೇರಿಯ ಲೆಕ್ಕ ಪತ್ರ ಶಾಖೆಗೆ ಕಳುಹಿಸಲು ಸುಮಾರು 20 ತಿಂಗಳ ವಿಳಂಬವಾಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.

17. ಎದುರುದಾರರು 5 ತಿಂಗಳ ವಿಳಂಬ ಮಾಡಿ ದಿನಾಂಕ:23-06-2020 ರಂದು ತಮ್ಮ ಎಲ್.ಪಿ.ಸಿ. ಕಳುಹಿಸಿರುತ್ತಾರೆ ಎನ್ನುವ ದೂರುದಾರರ ಆಪಾದನೆಗೆ ಸಂಬಂಧಪಟ್ಟಂತೆ ದೂರುದಾರರು ದಿನಾಂಕ:29-01-2020 ರಂದು ಬಿಬಿಎಂಪಿ. ಕಛೇರಿಯಿಂದ ಬಿಡುಗಡೆ ಹೊಂದಿರುವುದಾಗಿ ಹೇಳಿರುತ್ತಾರೆ. ಅದನ್ನು ಎದುರುದಾರರು ಅಲ್ಲಗಳೆದಿರುವುದಿಲ್ಲ.

18. ದಿನಾಂಕ:23-06-2020 ರಂದು ತಮ್ಮ ಎಲ್.ಪಿ.ಸಿ.ಯನ್ನು ಕಳುಹಿಸಿರುವುದು ದೂರುದಾರರು ಒಪ್ಪಿಕೊಂಡಿರುತ್ತಾರೆ. ಆದರೆ, ವಿಳಂಬದ ಬಗ್ಗೆ 1ನೇ ಎದುರುದಾರರು ನೀಡಿರುವ ವಿವರಣೆ ಅಂದರೆ, ಆ ಸಮಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಸರ್ಕಾರವು ಲಾಕ್‌ಡೌನ್ ಘೋಷಿಸಿದ್ದರಿಂದ ಕಛೇರಿಯಲ್ಲಿ ಕೇವಲ 50% ಸಿಬ್ಬಂದಿಯು ಕಾರ್ಯನಿರ್ವಹಿಸಿದ್ದರಿಂದ ವಿಳಂಬವಾಗಿ ದಿನಾಂಕ:23-06-2020 ರಂದು ಕಳುಹಿಸಲಾಗಿದೆ ಎಂಬುದು ಇರುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಬಿಬಿಎಂಪಿ., ಕಛೇರಿಯಿಂದ ದೂರುದಾರರು ದಿನಾಂಕ:29-01-2020

ರಂದು ಬಿಡುಗಡೆ ಆಗಿರುವುದು ಇರುತ್ತದೆ. ಆದರೆ, ಕೋವಿಡ್-19 ರ ಸೋಂಕಿನ ನಿಮಿತ್ತ ಮಾರ್ಚ್-23, 2020 ರಂದು ಸರ್ಕಾರವು ಸಂಪೂರ್ಣ ಲಾಕ್‌ಡೌನ್ ಘೋಷಿಸಿರುವುದು ಗಮನಿಸಬಹುದಾಗಿದೆ. ಆ ಅವಧಿಗಾಗಲೇ ಅಂದರೆ, ಸರ್ಕಾರವು ಸಂಪೂರ್ಣ ಲಾಕ್‌ಡೌನ್ ಘೋಷಿಸುವ ಸಮಯದಲ್ಲಿ ಎಲ್.ಪಿ.ಸಿ. ಕಳುಹಿಸಲು ಸುಮಾರು ಒಂದು ತಿಂಗಳ 20 ದಿನಕ್ಕಿಂತ ಹೆಚ್ಚಿಗೆ ವಿಳಂಬವಾಗಿರುವುದು ಕಂಡುಬರುತ್ತದೆ. ಹೀಗಾಗಿ ವಿಳಂಬಕ್ಕೆ ಸಂಬಂಧಿಸಿದಂತೆ 1ನೇ ಎದುರುದಾರರ ವಿವರಣೆಯಾದ ಲಾಕ್‌ಡೌನ್ ಹಾಗೂ 50% ನೌಕರರು ಮಾತ್ರ ಕೆಲಸಕ್ಕೆ ಹಾಜರಾಗುತ್ತಿದ್ದರಿಂದ ದಿನಾಂಕ:23-06-2020 ರಂದು ಎಲ್.ಪಿ.ಸಿ. ಕಳುಹಿಸಲಾಗಿದೆ, ಇದರಲ್ಲಿ ಯಾವುದೇ ವಿಳಂಬ ಇಲ್ಲ ಎನ್ನುವ 1ನೇ ಎದುರುದಾರರ ಪ್ರತಿಪಾದನೆ ಒಪ್ಪಿಕೊಳ್ಳಲು ಆಗುವುದಿಲ್ಲ. ಕಾರಣ, ದೂರುದಾರರು ದಿನಾಂಕ:29-01-2020 ರಂದು ಬಿಬಿಎಂಪಿ., ಕಛೇರಿಯಿಂದ ಬಿಡುಗಡೆ ಆಗಿರುವ ದಿವಸದಿಂದ ಮಾರ್ಚ್-23-2020 ರವರೆಗೆ ಯಾವುದೇ ಲಾಕ್‌ಡೌನ್ ಆಗಲೀ ಅಥವಾ ಕೋವಿಡ್ ನಿಬಂಧನೆಗಳಾಗಲೀ ಇರಲಿಲ್ಲ ಎನ್ನುವ ಅಂಶ ಗಮನಿಸಬಹುದಾಗಿದೆ. ಈ ಕಾರಣದಿಂದ 1 ತಿಂಗಳ 20 ದಿವಸದ ಅವಧಿಯೊಳಗೆ 1ನೇ ಎದುರುದಾರರು ದೂರುದಾರರ ಎಲ್.ಪಿ.ಸಿ. ಸರ್ಕಾರವು ಲಾಕ್‌ಡೌನ್ ಘೋಷಿಸುವ ಮೊದಲೇ ಕಳುಹಿಸದೇ ವಿಳಂಬ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

19. ಮೇಲೆ ಚರ್ಚಿಸಿದ ಕಾರಣಗಳಿಂದಾಗಿ, ದೂರುದಾರರಿಗೆ ಸಂಬಂಧಪಟ್ಟ ನವೆಂಬರ್-2019ರ ಮಾಹೆಯ 20 ದಿನಗಳ ಸಂಬಳದ ಬಿಲ್ ಮತ್ತು ಗಳಿಕೆರಜೆಯ ಬಿಲ್ಲನ್ನು ನಗದೀಕರಣಕ್ಕಾಗಿ ಹಾಗೂ ಅನುಮೋದನೆಗಾಗಿ 1ನೇ ಎದುರುದಾರರು ಕೇಂದ್ರ ಕಛೇರಿಯ ಲೆಕ್ಕಪತ್ರ ಶಾಖೆಗೆ ಕಳುಹಿಸಲು 20 ತಿಂಗಳ ವಿಳಂಬ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಹಾಗೂ ಬಿಬಿಎಂಪಿ., ಕಛೇರಿಯಿಂದ ದೂರುದಾರರು ಬಿಡುಗಡೆಯಾದ ನಂತರ ಅವರಿಗೆ ಸಂಬಂಧಪಟ್ಟ ಎಲ್.ಪಿ.ಸಿ.ಯನ್ನು ಕಳುಹಿಸಲು 1ನೇ ಎದುರುದಾರರು ವಿಳಂಬ ಮಾಡಿರುವುದು ಸಹ ಮೇಲ್ನೋಟಕ್ಕೆ ಕಂಡುಬರುತ್ತದೆ. ಈ

ವಿಳಂಬದಿಂದ ಸರ್ಕಾರಿ ನೌಕರರಾದ ದೂರುದಾರರಿಗೆ ಮಾನಸಿಕ ಹಿಂಸೆ ಆಗಿರುತ್ತದೆ ಎನ್ನುವ ದೂರುದಾರರ ಪ್ರತಿಪಾದನೆಯನ್ನು ಒಪ್ಪಲೇ ಬೇಕಾಗುತ್ತದೆ.

20. ಇನ್ನೂಳಿದಂತೆ, ಮುಖ್ಯ ಇಂಜಿನೀಯರಾದ ಶ್ರೀ ಸೋಮಶೇಖರ್ ಎಸ್. ರವರು ತಮ್ಮ ಊರಿನಲ್ಲಿ ದೇವಸ್ಥಾನ ನಿರ್ಮಿಸಲು 2 ಲಕ್ಷ ರೂಪಾಯಿಗಳನ್ನು ನೀಡುವಂತೆ ಕೇಳಿದ್ದು, ಈ ಬಗ್ಗೆ ತಾವು ರೂ.50,000/- ಗಳನ್ನು ನೀಡಿದ್ದು ಉಳಿಕೆ ಹಣ ಪಾವತಿಸಲು ಕಾರ್ಯಪಾಲಕ ಅಭಿಯಂತರರಾದ ಎದುರುದಾರರ ಮುಖಾಂತರ ಒತ್ತಾಯಿಸಿ ಕಿರುಕುಳ ನೀಡುತ್ತಿದ್ದಾರೆ ಎನ್ನುವ ಆಪಾದನೆಗೆ ಸಂಬಂಧಪಟ್ಟಂತೆ ದೂರುದಾರರು ತಮ್ಮ ದೂರಿನಲ್ಲಿ ಆಪಾದಿಸಿರುವುದನ್ನು ಹೊರತುಪಡಿಸಿ ಸದರಿ ಆಪಾದನೆಯನ್ನು ಮೇಲ್ನೋಟಕ್ಕೆ ರುಜುವಾತುಪಡಿಸುವಂತಹ ವಿವರವಾಗಲೀ ಅಥವಾ ದಾಖಲೆಗಳನ್ನಾಗಲೀ ಹಾಜರುಪಡಿಸಿರುವುದಿಲ್ಲ. ಮೇಲಾಗಿ ತಮ್ಮ ಪ್ರತ್ಯುತ್ತರದಲ್ಲಿ ಯಾವುದೇ ಅಂಶಗಳನ್ನು ಉಲ್ಲೇಖಿಸಿರುವುದಿಲ್ಲ. ಹೀಗಾಗಿ, ಎದುರುದಾರರ ವಿರುದ್ಧ ಈ ಆರೋಪ ಆಧಾರ ರಹಿತ ಎನ್ನುವ ಎದುರುದಾರರ ಪ್ರತಿಪಾದನೆ ಒಪ್ಪಲೇ ಬೇಕಾಗುತ್ತದೆ.

21. ದೂರುದಾರರ 20 ದಿವಸಗಳ ವೇತನದ ಬಿಲ್, ಗಳಿಕೆ ರಜೆ ನಗದೀಕರಣದ ಬಿಲ್ ಹಾಗೂ ಎಲ್.ಪಿ.ಸಿ. ಕಳುಹಿಸಲು ಆಗಿರುವ ವಿಳಂಬಕ್ಕೆ 1 ನೇ ಎದುರುದಾರರು ಹೊಣೆಗಾರರೋ ಅಥವಾ 2ನೇ ಎದುರುದಾರರು ಹೊಣೆಗಾರರೋ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಎದುರುದಾರರ ಸೇವಾ ವಿವರವನ್ನು ಪರಿಶೀಲಿಸಿದಾಗ, 1ನೇ ಎದುರುದಾರರು ದಿನಾಂಕ:01-08-2019 ರಿಂದ ಕಾರ್ಯಪಾಲಕ ಅಭಿಯಂತರರು, ರೋಡ್ ಇನ್‌ಫ್ರಾಸ್ಟ್ರಕ್ಚರ್, ಈಸ್ಟ್ ಡಿವಿಜನ್, ಬಿಬಿಎಂಪಿ., ಬೆಂಗಳೂರು ಆಗಿ ಕರ್ತವ್ಯ ನಿರ್ವಹಿಸಿರುವುದು ಕಂಡುಬರುತ್ತದೆ ಹಾಗೂ 1ನೇ ಎದುರುದಾರರ ನಿವೃತ್ತಿ ದಿನಾಂಕ:31-12-2021 ಆಗಿರುವುದು ಕಂಡುಬರುತ್ತದೆ. 2ನೇ ಎದುರುದಾರರ ಸೇವಾ ವಿವರವನ್ನು ಪರಿಶೀಲಿಸಿದಾಗ, ಸದರಿಯವರು ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ದಕ್ಷಿಣ ಬಿಬಿಎಂಪಿ, ಬೆಂಗಳೂರು ಆಗಿ ದಿನಾಂಕ:29-01-2021 ರಂದು ಕರ್ತವ್ಯಕ್ಕೆ ವರದಿ

ಮಾಡಿಕೊಂಡಿರುವುದು ಕಂಡುಬರುತ್ತದೆ. ಹೀಗಾಗಿ, ದೂರುದಾರರಿಗೆ ಸಂಬಂಧಪಟ್ಟ 20 ದಿವಸಗಳ ವೇತನದ ಬಿಲ್, ಗಳಿಕೆ ರಜೆ ನಗದೀಕರಣ ಬಿಲ್ ತಯಾರಿಸಿದ ಸಮಯದಲ್ಲಿ ಹಾಗೂ ದೂರುದಾರರಿಗೆ ಸಂಬಂಧಪಟ್ಟ ಎಲ್.ಪಿ.ಸಿ. ಕಳುಹಿಸುವ ಅವಧಿಯಲ್ಲಿ 1ನೇ ಎದುರುದಾರರೇ ಕಾರ್ಯಪಾಲಕ ಅಭಿಯಂತರರು, ರೋಡ್ ಇನ್‌ಫ್ರಾಸ್ಟ್ರಕ್ಚರ್, ಈಸ್ಟ್ ಡಿವಿಜನ್, ಬಿಬಿಎಂಪಿ., ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಕಾರಣದಿಂದ, 1ನೇ ಎದುರುದಾರರು ದೂರುದಾರರ ಬಿಲ್‌ಗಳು ಹಾಗೂ ಎಲ್.ಪಿ.ಸಿ.ಗೆ ಸಂಬಂಧಪಟ್ಟ ವಿಳಂಬಕ್ಕೆ ಹೊಣೆಗಾರರಾಗಿರುತ್ತಾರೆಯೇ ಹೊರತು 2ನೇ ಎದುರುದಾರರು ಹೊಣೆಗಾರರಾಗುವುದಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

22. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, 1ನೇ ಎದುರುದಾರರಾದ ಶ್ರೀ ಎಂ.ಜಿ.ನಾಗರಾಜ್, ಕಾರ್ಯಪಾಲಕ ಅಭಿಯಂತರರು, ರೋಡ್ ಇನ್‌ಫ್ರಾಸ್ಟ್ರಕ್ಚರ್, ಈಸ್ಟ್ ಡಿವಿಜನ್, ಬಿಬಿಎಂಪಿ., ಬೆಂಗಳೂರು (ನಿವೃತ್ತಿ ದಿನಾಂಕ: 31-12-2021) ರವರ ವಿಳಂಬಧೋರಣೆಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 2021 ರ ನಿಯಮ 3(1)(i) ರಿಂದ (iii) ರಂತೆ ಉಲ್ಲಂಘನೆ ಆಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಕಾರಣಕ್ಕಾಗಿ, ದೂರುದಾರರಿಗೆ 1ನೇ ಎದುರುದಾರರ ವಿಳಂಬಧೋರಣೆಯಿಂದ ಆಗಿರುವ ಆರ್ಥಿಕ ನಷ್ಟಕ್ಕಾಗಿ ದೂರುದಾರರ ಬಿಲ್ಲುಗಳು ಪಾವತಿ ಆಗಲು ವಿಳಂಬವಾದ ಅವಧಿಗೆ ಪಾವತಿ ಆಗಬೇಕಿದ್ದ ಹಣದ ಮೇಲೆ ವಾರ್ಷಿಕ ಶೇಕಡ 8% ಬಡ್ಡಿಯನ್ನು ದೂರುದಾರರಿಗೆ ಪಾವತಿಸಲು 1ನೇ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ 1ನೇ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

23. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ

ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ಅನುಸಾರಣಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

28/2/22

[ **ನ್ಯಾಯಮೂರ್ತಿ ಬಿ.ಎಸ್.ಪಾಟೀಲ್** ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.